ಸುಂಟರಗಾಳಿ, ಭೂಕುಸಿತ, ಹಿಮಪಾತ, ಹಿಮದ ಬೆಟ್ಟಗಳ ಕುಸಿತ ಎಲ್ಲ ಹೆಚ್ಚಾಗ್ತಾ ಇರೋದಕ್ಕೆ ಅದೇ ಕಾರಣವಂತೆ.

**ಅವಳು:** ಇಷ್ಟಾಗಿಯೂ ಬಡವರ ಸಂಖ್ಯೆ ಮಾತ್ರ ಗಾಂಧೀಜಿಯ ಕಾಲದಲ್ಲಿ ಎಷ್ಟಿತ್ತೊ ಅಷ್ಟೇ ಇದೆ ಅಂತ ಅಂಕಿಸಂಖ್ಯೆ ಹೇಳ್ತಾ ಇವೆ. ಆದರೆ... ಅದೇನೊ ಗ್ರೀನ್ ಎಕಾನಮಿ ಜಾರಿಗೆ ಬರಬೇಕು, ಅದಕ್ಕೆ ಗಾಂಧೀಜಿ ಹೇಳಿದ ಅರ್ಥವ್ಯವಸ್ಥೆನೇ ಮತ್ತೆ ಜಾರಿಗೆ ಬರಬೇಕು ಅಂತ ವಿಶ್ವಸಂಸ್ಥೆ ಹೇಳಿದೆಯಂತೆ...?

**ಅವನು:** ಹೌದು, ಸುಮಾರು ವರ್ಷಗಳ ಹಿಂದೆ ವಿಶ್ವಸಂಸ್ಥೆ ಅದನ್ನೇ ಹೇಳಿತ್ತು. 2012ನೇ ಇಸವಿಯನ್ನು 'ಹಸುರು ಆರ್ಥಿಕತೆಯ ವರ್ಷ' ಅಂತ ವಿಶ್ವಸಂಸ್ಥೆ ಘೋಷಣೆ ಮಾಡಿತ್ತು. "ಪೆಟ್ರೋಲು, ಡೀಸೆಲ್ಲು, ಕಲ್ಲಿದ್ದಲು ಇಂಥ ಹೊಗೆ ಕಾರುವ ಇಂಧನಗಳ ಬದಲು ನಿಸರ್ಗದಲ್ಲಿ ಸಿಗುವ ಗಾಳಿ, ಬಿಸಿಲು, ಸಮುದ್ರದ ಅಲೆ, ಗೋಬರ್ ಅನಿಲ, ಹೊಂಗೆ ಎಣ್ಣೆಯಂಥ ಜೈವಿಕ ಇಂಧನಗಳನ್ನೇ ಬಳಸಬೇಕು. ನವೀಕರಿಸಬಹುದಾದ ನಿರಂತರ ಶಕ್ತಿಮೂಲಗಳನ್ನೇ ಬಳಸಬೇಕು. ಗ್ರಾಮಗಳೇ ಶಕ್ತಿ ಉತ್ಪಾದನಾ ಕೇಂದ್ರ ಆಗಬೇಕು. ಗಾಂಧೀಜಿ ಹೇಳಿದ್ದ ಸುಸ್ಥಿರ ಅಭಿವೃದ್ಧಿ ನಮಗೆ ಆದರ್ಶ ಆಗಬೇಕು" ಎಂದು ವಿಶ್ವಸಂಸ್ಥೆ ಹೇಳಿಕೆ ಹೊರಡಿಸಿತ್ತು. ಅಂದರೆ ನೋಡಿ, ಗಾಂಧೀಜಿ ನಮ್ಮ ಜೊತೆ ಈಗ ಇಲ್ಲ. ಆದರೆ, ಅವರ ವಿಚಾರಗಳು ವಿಶ್ವಮಟ್ಟದಲ್ಲಿ ಈಗಲೂ ಚರ್ಚೆಗೆ ಬರ್ತಾ ಇವೆ. ನಮ್ಮ ಭಾರತೀಯ ವಿಜ್ಞಾನ ಸಂಸ್ಥೆಯೂ ಸೇರಿದ ಹಾಗೆ, ಅನೇಕ ಸಂಘ ಸಂಸ್ಥೆಗಳು ಗಾಂಧೀಜಿ ಹೇಳಿದಂಥ ಸರಳ ತಂತ್ರಜ್ಞಾನಗಳನ್ನು ಹಳ್ಳಿಗೆ ಮತ್ತೆ ಪರಿಚಯ ಮಾಡಿಸುವ ಯತ್ನದಲ್ಲಿ ತೊಡಗಿವೆ.

**ಅವಳು:** 'ತ್ಯಾಜ್ಯ ಕಮ್ಮಿ ಮಾಡಿ'... 'ಬಳಸಿದ ವಸ್ತುಗಳ ಮರುಬಳಕೆ, ಮರು ಉತ್ಪಾದನೆ ಮಾಡಿ' ಅಂತ ಈಗ ಎಲ್ಲರೂ ಹೇಳ್ತಾ ಇದ್ದಾರೆ. ಗಾಂಧೀಜಿ ಯಾರೋ ಬಿಸಾಕಿದ ಕಾಗದದ ಚೂರನ್ನೇ ಎತ್ತಿಟ್ಟುಕೊಂಡು ಟಿಪ್ಪಣಿ ಬರ್ಕೊಳ್ತಾ ಇದ್ರು. ಲಕೋಟೆಯ ಹಿಂಬದಿಗೆ ಪತ್ರ ಬರೀತಾ ಇದ್ರು. ಮತ್ತೆ ಗಾಂಧೀಜಿಯ ಹೋರಾಟದ ವಿಧಾನಗಳು, 'ಸತ್ಯಾಗ್ರಹ'—ಅಹಿಂಸಾತ್ಮಕ ಹೋರಾಟ... ಎಷ್ಟೋ ದೇಶಗಳಲ್ಲಿ ಈಗ ಪರಿಸರ ಸಂರಕ್ಷಣೆಗೆ ಅವೇ ಮಾರ್ಗಸೂಚಿ ಆಗಿವೆ. ಪರಿಸರ ನಾಶದ ವಿರುದ್ಧ 55 ದೇಶಗಳಲ್ಲಿ ಅಹಿಂಸಾತ್ಮಕ ಹೋರಾಟ ಮಾಡ್ತಾ ಇರೋ 'ಗ್ರೀನ್‌ಪೀಸ್' ಸಂಸ್ಥೆಗೆ ಗಾಂಧೀಜಿಯೇ ಆದರ್ಶ ಅಂತ ಅವರ ಸಾಹಿತ್ಯಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅರಣ್ಯನಾಶದ ವಿರುದ್ಧ, ಕೊಳಕು ಹಬ್ಬಿಸುವ ಕಾರ್ಖಾನೆ ವಿರುದ್ಧ ಅದೆಷ್ಟೊ ದೇಶಗಳಲ್ಲಿ ಗಾಂಧೀಜಿಯ ಸತ್ಯಾಗ್ರಹವೇ ಮಾದರಿ ಆಗಿದೆ. ಜರ್ಮನಿಯ ಗ್ರೀನ್ ಪಾರ್ಟಿ ತನಗೆ ಗಾಂಧೀಜಿಯೇ ಆದರ್ಶ ಅಂತ ಎಂದೋ ಹೇಳಿದೆ.

**ಅವನು:** ಅದು ಗಾಂಧೀಜಿ ರಾಜಕೀಯವನ್ನು ಆದರ್ಶವಾಗಿ ಇಟ್ಟುಕೊಂಡಿರಬಹುದು. ಆದರೆ, ಗಾಂಧೀಜಿಯ ಆದರ್ಶಕ್ಕೆ ಎಷ್ಟೊಂದು ಆಯಾಮ ಇದೆ ಗೊತ್ತಾ? ಅವರ ಹೆಸರಿನಲ್ಲಿ ನಮ್ಮ ಭಾರತ ಸರಕಾರ ಪ್ರತಿ ವರ್ಷ ಒಂದು ಕೋಟಿ ರೂಪಾಯಿ ಮೊತ್ತದ "ಗಾಂಧೀ ಶಾಂತಿ ಪುರಸ್ಕಾರ" ಅನ್ನೋ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಕಳೆದ 25 ವರ್ಷಗಳಿಂದ ಕೊಡ್ತಾನೇ ಬಂದಿದೆ. ಅದಕ್ಕೆ ಭಾರತದ ನೊಬೆಲ್ ಅಂತನೇ ಮಾನ್ಯತೆ ಇದೆ. ಐರ್ಲೆಂಡ್, ಜರ್ಮನಿ, ಅಮೆರಿಕ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ, ಝೆಕ್ ಗಣರಾಜ್ಯ, ಟಾಂಝಾನಿಯಾ ಹೀಗೆ ಅದೆಷ್ಟೊಂದು ದೇಶಗಳಲ್ಲಿ ಗಾಂಧೀಜಿಯ ಆದರ್ಶಗಳ ಪಾಲನೆ ಮಾಡ್ತಾ ಇರೋ ವ್ಯಕ್ತಿಗಳು, ಸಂಸ್ಥೆಗಳಿಗೆ ಈ ಪುರಸ್ಕಾರ ಸಿಕ್ಕಿದೆ. ಅವರಲ್ಲಿ ಸರ್ವೋದಯ, ಗ್ರಾಮಾಭಿವೃದ್ಧಿ ಚಳವಳಿ ನಡೆಸ್ತಾ ಇರೋರು, ಕುಷ್ಠರೋಗ ನಿವಾರಣೆಗೆ ಶ್ರಮ